**<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>**

**<u>ಸಿ.ಸಿ.ನಂ.616/2014</u>**

ಅಸಾಃ 6 (ಚಾಸಾ-12)

| | |
|---|---|
| ಹೆಸರು | ಕರಿಯಪ್ಪ ಬನ್ನೆ |
| ತಂದೆಯ /ಗಂಡನ ಹೆಸರು | ಬೀರಪ್ಪ |
| ವಯಸ್ಸು | 46 ವರ್ಷ |
| ಉದ್ಯೋಗ | ಪೋಲಿಸ್ ಇನ್ಸಪೆಕ್ಟರ್ ಲೋಕಾಯುಕ್ತ ಧಾರವಾಡ |
| ವಾಸಸ್ಥಳ | ಧಾರವಾಡ |

ದಿನಾಂಕ 17-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-</u>**

ಸೆಪ್ಟೆಂಬರ್ -2013 ರಿಂದ ಆಗಸ್ಟ-2016 ರ ವರೆಗೆ ನಾನು ತೇರದಾಳ ಪೋಲಿಸ್ ಠಾಣೆಯಲ್ಲಿ ಪಿಎಸ್ಐ ಅಂತಾ ಕರ್ತವ್ಯ ನಿರ್ವಹಿಸಿದ್ದೇನೆ.

ದಿನಾಂಕ 09-12-2013 ರಂದು ಈ ಪ್ರಕರಣದ ಕಡತವನ್ನು ಚಾಸಾ-11 ರವರಿಂದ ವಹಿಸಿಕೊಂಡು ಮುಂದಿನ ತನಿಖೆ ಕೈಗೊಂಡಿರುತ್ತೇನೆ. ಅದೇ ದಿನ ಮತ್ತು ದಿನಾಂಕ 20-12-2013 ಮತ್ತು 02-01-2014 ರಂದು ಚಾಸಾ-1 ರವರಿಗೆ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ನೋಟೀಸ್ ನೀಡಿರುತ್ತೇನೆ. ದಿನಾಂಕ 18-01-2014 ರಂದು ಚಾಸಾ-1 ರವರಿಂದ ದಾಖಲೆಗಳನ್ನು ಪಡೆದಿರುತ್ತೇನೆ. ದಿನಾಂಕ 31-03-2014 ರಂದು ಆರೋಪಿತರೆಲ್ಲರೂ ಪರಾರಿಯಾಗಿದ್ದಾರೆಂದು ಅವರ ವಿರುದ್ಧ ದೋಷಾರೋಪಣ ಪಟ್ಟಿಯಲ್ಲಿ ನಮೂದಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎಸ್ ವ್ಹಿ ಜಿ ವಕೀಲರಿಂದ:-</u>**

ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಅವರ ಮೇಲೆ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರು ಈ ಪ್ರಕರಣದ ಫಿರ್ಯಾದಿಯ ಮೇಲೆ ಪ್ರತಿದೂರು ಸಲ್ಲಿಸಿದ್ದಾರೆಂದರೆ ಇರಬಹುದು. ಅದು ಸಿಸಿನಂ.654/2014 ಎಂದು ದಾಖಲಾಗಿದೆ ಎಂದರೆ ಇರಬಹುದು. ಚಾಸಾ-1 ರವರು ಹಾಜರುಪಡಿಸಿದ ದಾಖಲೆಗಳನ್ನು ನಾನು ಚೌಕಾಶಿ ಮಾಡಿರುತ್ತೇನೆ. ಫಿರ್ಯಾದುದಾರರಿಗೆ ಅನುಕೂಲವಾಗಲಿ ಎಂದು ಆರೋಪಿತರ ಮೇಲೆ ಸುಳ್ಳು ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.

<u>ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ. ದಂಡಾಧಿಕಾರಿಗಳು, ಬನಹಟ್ಟಿ</u>

<u>ಸಿ.ಸಿ.ನಂ.616/2014</u>

ಅಸಾಃ 7 (ಚಾಸಾ-11)

| | |
|---|---|
| ಹೆಸರು | ಲಕ್ಷ್ಮಣ ದುಡ್ಡನಗಿ |
| ತಂದೆಯ /ಗಂಡನ ಹೆಸರು | ಭೀಮಣ್ಣ |
| ವಯಸ್ಸು | 53 ವರ್ಷ |
| ಉದ್ಯೋಗ | ಎಎಸ್ಐ ಮಹಾಲಿಂಗಪೂರ ಪೋಲಿಸ್ ಠಾಣೆ |
| ವಾಸಸ್ಥಳ | ಮಹಾಲಿಂಗಪೂರ |

ದಿನಾಂಕ 17-02-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದಃ-</u>

2011 ರಿಂದ 2017 ರವರೆಗೆ ನಾನು ತೇರದಾಳ ಪೋಲಿಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕೆಲಸ ನಿರ್ವಹಿಸಿದ್ದೇನೆ.

ದಿನಾಂಕ 08-12-2013 ರಂದು ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರಿನ ಸಾರಾಂಶದ ಮೇರೆಗೆ ನಮ್ಮ ಠಾಣಾ ಗುನ್ನಾ ನಂ.148/2013 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಮತ್ತು ನನ್ನ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಸಾಕ್ಷಿ ಚಾಸಾ-1 ರವರು ನೀಡಿದ ಫಿರ್ಯಾದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-8 ಎ ಅಂತಾ, ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ-9 ಎಂದು ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಪಿ-9 ಎ ಅಂತಾ ಗುರುತಿಸಲಾಯಿತು. ಅದೇ ದಿನ ಸಂಜೆ 4 ರಿಂದ 5 ಗಂಟೆವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ನಿಪಿ-1 ರಂತೆ ಸ್ಥಳಪಂಚನಾಮೆ ಮಾಡಿ, ಸ್ಥಳದಿಂದ ಎಂ.ಓ-1 ರಂತೆ ಒಂದು ಕೀಲಿಯನ್ನು ಜಪ್ತಿಪಡಿಸಿಕೊಂಡಿರುತ್ತೇನೆ. ಸಾಕ್ಷಿ ಎಂ.ಓ-1 ಕ್ಕೆ ಅಂಟಿಸಿದ್ದ ಚೀಟಿಯಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಎಂ.ಓ-1 ಬಿ ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಬಿ ಅಂತಾ ಗುರುತಿಸಲಾಯಿತು. ಆ ಕಾಲಕ್ಕೆ ನಿಪಿ-2 ರಿಂದ ನಿಪಿ-6 ರಂತೆ ಫೋಟೋಗಳನ್ನು ತೆಗೆಸಿರುತ್ತೇನೆ. ನಂತರ ಚಾಸಾ-4 ರಿಂದ 10 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-12 ರವರಿಗೆ ವಹಿಸಿಕೊಟ್ಟಿರುತ್ತೇನೆ.

**<u>ಪಾಟೀಸವಾಲುಃ ಆರೋಪಿತರ ಪರ ಶ್ರೀ.ಎಸ್ ವ್ಹಿ ಜಿ ವಕೀಲರಿಂದ:-</u>**

ಸ್ಥಳದಲ್ಲಿದ್ದ ಪಂಚರನ್ನು ಕರೆಸಿ ಪಂಚನಾಮೆ ಮಾಡಲಾಯಿತು. ಎಂ.ಓ-1 ರಂತಹ ಕೀಲಿ ಮಾರುಕಟ್ಟೆಯಲ್ಲಿ ಸಾಮಾನ್ಯವಾಗಿ ಸಿಗುತ್ತವೆ ಎಂದರೆ ಇರಬಹುದು, ಆದರೆ ಎಂ.ಓ-1 ನ್ನು ನಾವು ಘಟನಾ ಸ್ಥಳದಲ್ಲಿ ಜಪ್ತಿಪಡಿಸಿಕೊಂಡಿದ್ದೇವೆ. ಎಂ.ಓ-1 ನ್ನು ನಾನು ಮಾರುಕಟ್ಟೆಯಿಂದ ತಂದು ಈ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆಗಳನ್ನು ಪಡೆದಿರುತ್ತೇನೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಿಪಿ-2 ರಿಂದ ನಿಪಿ-6 ರ ಫೋಟೋಗಳನ್ನು ಖೊಟ್ಟಿಯಾಗಿ ಸೃಷ್ಟಿಸಿದ್ದೇನೆಂದರೆ ಸರಿಯಲ್ಲ. ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಫಿರ್ಯಾದುದಾರರ ಮಾತು ಕೇಳಿ ಸುಳ್ಳು ದೂರನ್ನು ಸ್ವೀಕರಿಸಿ, ಸುಳ್ಳು ಪ್ರಕರಣ ದಾಖಲಿಸಿಕೊಂಡು ಅದರಂತೆ ಆರೋಪಿತರ ಮೇಲೆ ಸುಳ್ಳು ತನಿಖೆ ಕೈಗೊಂಡಿದ್ದೇನೆಂದರೆ ಸರಿಯಲ್ಲ. ಫಿರ್ಯಾದುದಾರರ ಆಸ್ತಿ ಉತಾರೆಯ ದಾಖಲೆಯನ್ನು ನಾನು ನೋಡಿರುವುದಿಲ್ಲ. ಘಟನೆ ನಡೆದಿದೆ ಎನ್ನಲಾದ ದಿನ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.